(55) 2

Regd No B G 155 — 8n — 23—3—1965

ಸತ್ಯವಾದಿ

48th Year
Satyavadi
DAILY
MYSORE

ಸಂಸ್ಥಾಪಕರು — ಅಂಮಸಿ ಸಿಂಸ್ಕೇದಾರ್ ಎಂ ಎ ಸುಬ್ಬರಾಯುರು ಸಂಪಾದಕರು — ಧರ್ಮಪ್ರಜಾಸಿಂಹ ಎಂ ಎಸ್ ಕೃಷ್ಣಂಶೆವ್ 2 ಪೈಸೆ

ಕೂಚಬಿಹಾರ ಗಡಿಯಲ್ಲಿ ಶಾಂತಿ

ಪಾಕಿಸ್ತಾನದ ಅರ್ಧ ಸೇನೆ ಸ್ವಧಾನದ ಅನ್ವೇಷಣೆಗಳು ಕೂಚಬಿಹಾರ ಜಿಲ್ಲೆ ವೆಕ್ಟ್ಗಂಜಿನಲ್ಲಿ ಧಾಳಿ ಹೂಡುತ್ತಿದ್ದುದು ನಿನ್ನೆಯಿಂದ ನಿಂತಿದೆ ಈ ಪ್ರದೇಶದಲ್ಲಿ ಕದನ ವಿರಾಮವು ಜಾರಿಗೆ ಬಂದಿದೆ ಪಾಕಿಸ್ತಾನ ಒಪ್ಪಿದೆ ಈ ಮಧ್ಯಾಹ್ನ ಪೂರ್ವ ಹಾಗೂ ಪಶ್ಚಿಮ ಬಂಗಾಳದ ಅಧಿಕಾರಿಗಳಿಗೆ ಮಾತುಕತೆ ನಡೆಯುವ ನಿರೀಕ್ಷೆ ಇದೆ.

★

ಅಭಿನಂದನೆ

ನ್ಯೂಜಿಲೆಂಡು ಮೇಲೆ ಭಾರತ ಕ್ರಿಕೆಟಿನಲ್ಲಿಗೆದ್ದಿದ್ದಕ್ಕೆ ಪ್ರಧಾನಿಗಳು ಹಾಗೂ ಉಪಾಧ್ಯಕ್ಷರು ಅಭಿನಂದಿಸಿದರು

★

ಎಚ್ಚರಿಕೆ

ರಷ್ಯ ಎಂದಿನ ಚೀನಾ ನಡೆಸುತ್ತಿರುವ ಅಪಪ್ರಚಾರಂತಿಂದ ಚೀನಾ ರಷ್ಯ ಸಂಬಂಧಕ್ಕೆ ಧಕ್ಕೆ ಉಂಟಾಗಿದೆ ಎಂದು ರಷಿಯದ ಸರ್ಕಾರಿ ಪತ್ರಿಕೆ ಇಜವೆಸ್ಟಿಯಾ ಎಚ್ಚರಿಸಿದೆ.

★

ಮಂತ್ರಿಯ ನುಡಿ

ಪೂನಾದಿಂದ ಬಂದ ವಾರ್ತೆ ದೇಶ ಆರ್ಥಿಕ ರೀತಿ ಅಭ್ಯುದಯಗೊಳ್ಳುತ್ತಿದ್ದಲೂ ಕೆಲವು ಕಡೆ ಜ್ಞಾನಕ್ಕೆ ಕ್ಷಾಮವಿದೆಯೆಂದು ಮಹಾರಾಷ್ಟ್ರ ಗೃಹ ಮಂತ್ರಿ ನುಡಿದರು

★

ಬೆಂಕಿ ಅನಾಹುತ

ಬೆಂಗಳೂರಿನಲ್ಲಿ 5 ಕಡೆಗಳಲ್ಲಿ ಬೆಂಕಿ ಅನಾಹುತವಾದವು ಆಸ್ತಿ ಹಾಗೂ ಪ್ರಾಣ ನಷ್ಟವಾಗಿಲ್ಲ.

★

ಬಂಧನ

ಬಂದೂಕದಿಂದ ಹೆದರಿಸಿ ಕಳೆದ ತಿಂಗಳು ಹುಣಸಿಮಾರ್ ಬ್ಯಾಂಕಿನ ಮ್ಯಾನೇಜರನ್ನು ಬಂದೂಕರೆ ಲಕ್ಷ ಕೇಳಿದ ವ್ಯಕ್ತಿಯನ್ನು ಪೋಲೀಸರು ಬಂಧಿಸಿದ್ದಾರೆ ಎಂದು ರಾಯ್ಪುರ ವಾರ್ತೆ ತಿಳಿಸಿದೆ ಕಾಯಿತ ಬಂಕೆ ಸಿಂಗೆಂದೂ ಪಂಜಾಬಿನ ಮಾಜಿ ಮುಖ್ಯ ಮಂತ್ರಿ ಪ್ರತಾಪಸಿಂಗರನ್ನು ಕೊಲೆ ಮಾಡಿದವನೆಂದು ತಿಳಿಸಿದ್ದಾರೆ ಪೊಲೀಸರು ಮಾಹಿತಿ ಕೊಂಡಿದ್ದಾಗ ಬಂಧಿತನಾದ

★

ನಿರಾಶೆಇಲ್ಲ

ಭಾರತದ ಭವಿಷ್ಯದ ಬಗ್ಗೆ ತಾವೇನು ನಿರಾಶೆಗೊಂಡಿಲ್ಲವೆಂದು ಆಚಾರ್ಯ ವಿನೋಬಾ ಜಲಂಧರನಲ್ಲಿ ನುಡಿದರು.

❀

ಬಂಧನ

ಜಯಪ್ರಕಾಶ್‌ರಿಂದ ಬಂದಿರುವ ವರದಿ ಪ್ರಕಾರ ರಾಜ್ಯದಲ್ಲಿ ಪಾಕಿಸ್ತಾನ ಪರ ಪುಸ್ತಕವನ್ನು ಬೋಧಿಸಿದ್ದಕ್ಕಾಗಿ ರಾಜಸ್ಥಾನದಲ್ಲಿ ಎಂಟು ಮಂದಿ ಭಾರತ ರಕ್ಷಣಾ ವಿಧಿಯಂತೆ ಬಂಧಿತರಾದರು.

❀

ಸಹಾಯ

ನವ ದೆಹಲಿಯಿಂದ ಬಂದ ವಾರ್ತೆ. ನೇತಾಜಿಯವರ ಭಾರತ ರಾಷ್ಟ್ರೀಯ ಸೇನೆಯಲ್ಲಿ ಸೇವೆ ಮಾಡಿದವರನ್ನು ಅವಲಂಬಿಸಿರುವವರಿಗೆ ರೂ 4 ಸೂರಿಂದ 6 ಸೂರ ವರೆಗೆ ಒಟ್ಟಿಗೆ ಸಹಾಯ ದ್ರವ್ಯ ಕೊಡಲು ಭಾರತ ಸರ್ಕಾರ ಆಜ್ಞೆ ಮಾಡಿದೆ.

ವಾರ್ತಾ ವಿಶೇಷಗಳು

ಕಾಂಗ್ರೆಸ್ಸೇತರ ಸರ್ಕಾರವನ್ನು ರಚಿಸಲು ಪ್ರಯತ್ನಿಸುವ ದಾಗಿ ಸಂಯುಕ್ತ ಸಮಾಜವಾದಿ ಪಕ್ಷ ಪ್ರಕಟಿಸಿದೆ ಎಂದು ವರದಿಯಾಗಿದೆ ಎಂದು ವಾರ್ತೆ.

ಆಡಳಿತ ಪಕ್ಷವಾಗಿರುವ ಮುಸ್ಲಿಂ ಲೀಗಿಗೆ ರಾಷ್ಟ್ರೀಯ ಸಭೆಯಲ್ಲಿ ಸ್ಪಷ್ಟ ಹೆಚ್ಚಾಗಿ ದೊರೆಯುತ್ತಿದೆ ಎಂದು ಕಾಂಗ್ರೆಸಿಯ ವಾರ್ತೆ ತಿಳಿಸುತ್ತದೆ

ದಾರಾವುಂಡಲ್ಲಿ ಮೊನ್ನೆ ಮುಂಜಾನೆಗಳಲ್ಲಿ ನೂರಕ್ಕೊಂಬತ್ತೊಂದು ಮೂಟೆಗಳ ಭತ್ತ ವಶಪಡಿಸಿಕೊಳ್ಳಲಾಯಿತು ರಶೀದಾರಿ ಇಲ್ಲದೆ ಹೊರಗೆ ಸಾಗಿಸಲಾಗುತ್ತಿತ್ತು.

ಮುಂದಿನ ನವೆಂಬರಿನಿಂದ ಹೈದರಾಬಾದು ಮೂಲಕ ನುದ್ರಾಸು ದೆಹಲಿಯು ವಿಮಾನ ಸಂಚಾರವನ್ನು ಭಾರತದ ವಿಮಾನ ಸಂಸ್ಥೆ ವ್ಯವಸ್ಥೆ ಮಾಡುವದು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪ್ರವೇಶ ನಿರೋಧ ಕಾರ್ಯಗಳಿಗೆ ಕೇಂದ್ರ ಮೂವತ್ತೈದು ಕೋಟಿ ರೂಪಾಯಿಗಳ ಗ್ರಾಂಟನ್ನು ಕೊಡಬೇಕೆಂದು ಆಸ್ಸಾಂ ಸರ್ಕಾರ ಕೇಂದ್ರವನ್ನು ಕೇಳಿದೆ.

ಭಾರತದಲ್ಲಿ ಅವಿರತ ಹೊಂದಿಂದ ರೂಪಾಯಿ ಹಿಡುವಳಿ ಏರ್ಪಾಡಿನಿಂದ ಉಪಯೋಗವಾದರೆ ಭಾರತಕ್ಕೆ ಉಪಯೋಗವಾಗುವದೆಂದು ಕಾಂಗ್ರೆಸಿನ ಸಮಿತಿಗೆ ಒಪ್ಪಿಗೆ ಆಗಿದೆ ಎಂದು ವಾಷಿಂಗ್ಟನ್ನಿನ ವಾರ್ತೆ.

ಬಾಹ್ಯಾಂತರಿಕ್ಷ ಶೋಧನೆಯಲ್ಲಿ ಈಗ್ಗೆ ದೇಶಕ್ಕಿಂತ ಕೆಲವು ಅಂತರದಲ್ಲಿ ರಷ್ಯ ಮುಂದುವರಿದಿದೆ ಎಂದು ಅಮೆರಿಕ ಅಧ್ಯಕ್ಷರಿಗೆ ಜಾನ್ಸನರು ಟೆಕ್ಸಾಸಿನ ಜಾನ್ಸನ್ ನಗರದಲ್ಲಿ ತಿಳಿಸಿದರು.

ಬೆಂಕಿ ಅನಾಹುತ

ರಂಗೂಗೆ ಸಲವತ್ತು ಮೈಲುಗಳ ದೂರದ ಪೆಗು ಪಟ್ಟಣದಲ್ಲಿ ಬೆಂಕಿ ಅನಾಹುತವಾಯಿತು: ಅಂಗಡಿಗಳು, ಗೋದಾಮುಗಳು, ಒಂದು ಎಣ್ಣೆ ಗಿರಣಿ, ಒಂದು ಸಿನಿಮಾ ದುಂದಿರ ಸೇರಿ ಏಳನೂರು ಮನೆಗಳು ನಾಶವಾದವು. 40 ಲಕ್ಷ ರೂಪಾಯಿಗಳ ಆಸ್ತಿ ನಾಶವಾದವು

ಘನತೆಗೆ ಕುಂದು

ಭಾರತದ ಮೇಲೆ ಚೀನಾ ಆಕ್ರಮಣ ಕಾರ್ಯವು ಭಾರತದ ಘನತೆಯನ್ನು ನಾಶ ಮಾಡುವದಕ್ಕಾಗಿದೆ ಏಷ್ಯ-ಆಫ್ರಿಕಾ ಪ್ರಪಂಚದಲ್ಲಿ ದೊಂಕಿಸಿಂಯನ ಅದರ ಗೌರವವಾದ ಶಟಸ್ಥ ನೀತಿಯನ್ನು ಹಾಳುಮಾಡುವದಾಗಿದೆ ಇದು ಚೀನಾದ ಉದ್ದೇಶ ಪಾಕಿಸ್ತಾನವು ಭಾರತವನ್ನು ದ್ವೇಷಿಸುವ ಜಳವಳಿಯನ್ನು ಮುಂದುವರಿಸುತ್ತಲೇ ಇದೆ ಎಂದು ವಿದೇಶಾಂಗ ವಿಚಾರ ಸಚಿವಾಲಯದ ವಕ್ತರು ತಿಳಿಸಿದೆ ಎಂದು ನವದೆಹಲಿ ವಾರ್ತೆ

★

ಕೂಚಬಿಹಾರ ಜಿಲ್ಲೆಯಿಂದ ವೆಕ್ಟ್ಗಂಜಿನ ಮೇಲೆ ಪೂರ್ವ ಪಾಕಿಸ್ತಾನದ ಅರ್ಧ ಸೇನಾ ಪಂಗಡವಾದ ಅನ್ವೇಷಣೆ ಗುಂಡನ್ನು ಹಾರಿಸುತ್ತಿರುವದಾಗಿ ಕಲ್ಕತ್ತಾ ವಾರ್ತೆ.

ನಿನ್ನೆ ಪೂರ್ವ ಹಾಗೂ ಉತ್ತರದ ಗಡಿಗಳಲ್ಲಿ ಮುಂದುವರಿಯುತ್ತಿರುವ ತೊಂದರೆಗಳ ಕುರಿತು ಪ್ರಧಾನಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರು ಅತಂಕ ವ್ಯಕ್ತಪಡಿಸಿದರು.

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾಂಸರಾದ ಧರ್ಮಾಧಿಕಾರಿ
ರಾಜಶೇಖರಶಾಸ್ತ್ರಿಗಳು, ಜ್ಯೋತಿರ್ವಿದ್ಯಾಸ್ಪತಿ
ಸಂದಕೃಷ್ಣಜೋಯಿಸರವರಿಂದ

1 24 ಮುಂದೆ ★ ಜ್ಯೋತಿಷ್ಯ

ಮನು ಸಂಹಿತೆಯನ್ನು ಯಾರು ಅಗೌರಿಸಿದರು ? ಮತ್ತು ಏಕೆ ?

★

(ಮುಂದುವರಿದುದು)

ವಿಜ್ಞಾನಕ್ಕೆ ಮತದಾನದ ಈ ಕಾಲದಲ್ಲಿ ಉತ್ಸವ ಬುದ್ಧಿಶಾಲಿಗಳು ಲೋಕ ಸಭಾಸದಸ್ಯಸ್ಥಾನಕ್ಕೆ ಆರಿಸಿಬರುವುದು ಬಹಳ ಅಪೂರ್ವವೆಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ ; ಭಾರತದ ಪಾರ್ಲಿಮೆಂಟಿನ ಮೇಲ್ಮನೆಯಲ್ಲಿ ಕೂಡಾ ಬುದ್ಧಿಶಾಲಿಗಳು ನೂಕ್ಕೆ ಇಪ್ಪತ್ತು ಜನರಿಗಿಂತಲೂ ಕಮ್ಮಿಯಾಗಿದ್ದಾರೆ ಎಂಬು ಜನರಿಗೆ ಕೆಲವು ಕಾಲದ ಹಿಂದೆ ನೆಹರೂರವರು ಹೇಳಿದ್ದರು , ಕೆಳಮನೆಯಲ್ಲಿ ಆದ ಕ್ಕಿಂತಲೂ ಕಮ್ಮಿಯಾಗಿದ್ದಾರೆಂಬುದರಲ್ಲಿ ಸಂಶಯವೇ ಇಲ್ಲ : ಎಂಡನೇ ಮತ್ತು ಮೂರನೇ ರೀತಿಯ ವಿದ್ಯಾರ್ಥಿಗಳು ವಿದ್ಯಾಕ್ಷೇತ್ರದಲ್ಲಿ ಮುಂದುವರೆಯುವುದೇ ರಾಜಕೀಯಕ್ಕೆ ಇಳಿದು ತಮ್ಮಲ್ಲಿರುವ ಗುಣಗಳನ್ನೆಲ್ಲಾ ಪ್ರಭಾವಮಾಡಿ ಅಜ್ಞ ಪಾಂರಿಂದ ಮತ ಪಡೆದು ರಾಜಕೀಯದಲ್ಲಿ ಭದ್ರವಾದ ಸ್ಥಾನ ಪಡೆಯುತ್ತಾರೆ :- ಇದರಿಂದ ಅವರುಗಳು ಲೋಕಸಭೆಗೆ ಸದಸ್ಯರಾಗಿ ಕೊನೆಗೆ ಈಸ ಮಂತ್ರಿಗಳ ಸ್ಥಾನವನ್ನೂ ಅಲಂಕರಿಸಬಹುದು ; ಇಂತಹ ವ್ಯಕ್ತಿಗಳು ಮನುಸ್ಮೃತಿಯ ಅಮೂಲ್ಯ ಬೆಲೆಯನ್ನು ತಿಳಿಯುವಾರೆಂದರೆ ಅದಕ್ಕಾಗಿ ಯಾರೂ ಆಶ್ಚರ್ಯಪಡ ಬೇಕಾಗಿಲ್ಲ ; ಆದರೆ ಇಂಥಾ ಸನ್ನಿವೇಶದಲ್ಲಿಯೂ ಲೋಕಸಭೆಯ ಯಾವ ಸದ ಸ್ಯನಿಗೂ, ಹಿಂದುಗಳ ಪವಿತ್ರ ಗ್ರಂಥಗಳನ್ನು ಅವಹೇಳನ ಮಾಡಲು ಯಾವ ಹಕ್ಕೂ ಇರುವುದಿಲ್ಲ.

ಇದಕ್ಕೆ ಸಂಬಂಧ ಪಟ್ಟಂತೆ ಮತ್ತೊಂದು ವಿಚಾರವನ್ನೂ ನಾವು ಗಮನಿಸಬೇಕು : ಪ್ರತಿಯೊಬ್ಬ ಮನುಷ್ಯನೂ ಯಾವುದಾದರೂ ವಿಚಾರದಲ್ಲಿ ಸರಿ ಯೇ ? ತಪ್ಪೇ ? ಎಂಬುದನ್ನು ತನ್ನ ಯೋಗ್ಯತೆಗೆ ತಕ್ಕಂತೆ ತಿಳಿಯುತ್ತಾನೆ ; ಒಬ್ಬ ಪತಿವ್ರತಾ ಸ್ತ್ರೀಯು, ತನ್ನ ಪ್ರಾಣಕ್ಕಿಂತಲೂ ಪತಿವ್ರತಾಧರ್ಮವು ಹೆಚ್ಚಿನ ದಾಗಿ ತಿಳಿಯುತ್ತಾಳೆ: ಆದರೆ ಒಬ್ಬಳು ವ್ಯಭಿಚಾರಿಣಿಗೆ ಪತಿವ್ರತಾಧರ್ಮಕ್ಕೆ ಒಂದು ಕವಡೆಯ ಬೆಲೆಯೂ ಇಲ್ಲ ; ಅಂಥಾ ವ್ಯಭಿಚಾರಿಣಿಗೆ ಬೇರೆಬೇರೆ ವ್ಯಕ್ತಿಗಳ ಕೂಡ ಬೆರೆಯುವುದು, ಬೇರೆಬೇರೆ ಆಹಾರವನ್ನು ತಿಂದಷ್ಟೇ ಸುಖವಾಗಿರುತ್ತದೆ ; ಒಬ್ಬ ಧಾರ್ಮಿಕ ಮನುಷ್ಯನು ತನ್ನ ಜೀವನೋಪಾಯಕ್ಕಾಗಿ ಒಂದು ವೃತ್ತಿಯನ್ನೂ ಕಳವು ಮಾಡುವುದಿಲ್ಲ ; ಆದರೆ ಅನುಭವಶಾಲಿಯಾದ ಕಳ್ಳನು ತನಗೆ ಅವಶ್ಯಕತೆ ಇಲ್ಲದಿದ್ದರೂ ಎಷ್ಟು ದೊಡ್ಡ ಮೊತ್ತದ ಹಣವನ್ನಾಗಲೀ ಕಳವು ಮಾಡಲು ಹಿಂದೆ ಮುಂದೆ ನೋಡುವುದಿಲ್ಲ : ಲಂಚವನ್ನು ಸ್ವೀಕರಿಸುವ ಒಬ್ಬ ಅಧಿಕಾರಿಯು ಪಾಪ ಮಾಡಿಕವಾಗಿ ಕೆಲಸಮಾಡುವ ತನ್ನ ನೌಕರನನ್ನು ದ್ವೇಷಿಸುತ್ತಾನೆ : ಅದೇ ಒ ಬ್ಬ ಪ್ರಾಮಾಣಿಕ ಅಧಿಕಾರಿಯು ಅಂಥಾ ನೌಕರನನ್ನು ಪ್ರೀತಿಸುತ್ತಾನೆ. [ಸಶೇಷ

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಪ್ರೊ|| ರವೀಂದ್ರಕುಮಾರ್ ಸಿದ್ಧಾಂತ ಶಾಸ್ತ್ರಿ, ಎಂ ಎ, ಎಫ್. ಆರ್. ಎಸ್. ರವರ ಲೇಖನದಿಂದ ಸಂಗ್ರಹಿಸಿದ್ದು

ಆ. ನ. ಅಹ್ಯುಗಾಕರ್



ಗೋರಕ್ಷಣ ಪ್ರಾಣಿಮಾತ್ರಕ್ಕೂ ಆಚಾರ್ಯಗಳು ಹೆಚ್ಚಿಚ್ಚಾಗಿ ನೆಡೆಯಲಿ

ವುಡ್‌ಲ್ಯಾಂಡ್ ಜನಪ್ರಿಯ 2 ನೇ ವಾರ

ಶಿನ್

ಬಿಮಲ್ ರಾಯ್‌ರವರ— ಮನಮೋಹಕ ಹಿಂದಿ ಚಿತ್ರ

ಬೆನೆಜ್ಜೀರ್ BENAZIR

ನಾಸ್ರ- ಅಶೋಕಕುಮಾರ್, ವೈಜಯಂತಿಮಾಲಾ, ಶಶಿಕಪೂರ್, ನಿರೂಪರಾಯ್ ಕನ್ನಡ

ಪ್ರತಿದಿನ 3 ಪ್ರದರ್ಶನಗಳು

ಆಪೆರಾ— ಜನಪ್ರಿಯ 3 ನೇ ವಾರ

ನಾಗಪೂಜಾ (ಕನ್ನಡ)

ಪ್ರಧಾನಾಭಿನಯ— ರಾಜಕುಮಾರ್, ಲೀಲಾವತಿ ರಾಜಶ್ರೀ, ರಾಘವೇಂದ್ರರಾವ್

ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI SUDHA

A Superb Tonic

Help The Gorakshana

"ಗೋರಕ್ಷಣ" ಕ್ಕೆ ಜೈಂಬಲಿಗಳಾಗಿರಿ

ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ ಪ್ರಚಾರಕ್ಕೆ ವಿಚಾರಗಳಿಂದ ಕೂಡಿದ ಏಕೈಕ ಪ್ರಥಮ ದರ್ಜೆಯ ದಿನಪತ್ರಿಕೆ.

ವಾರ್ಷಿಕ ಚಂದಾ 30 ರೂಪಾಯಿ : ಗೋರಕ್ಷಣ ಕ್ಕೆ ಬೇಕಾದಷ್ಟು ಪ್ರೋತ್ಸಾಹ ಧನವನ್ನು ದಂದಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ- ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M S Krishna Rao
at the Satya vadi Press Camarajapuram Mysore 4